# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 36/2014**

**ದೋ.ಸಾ. : 31 ಫ್ರಾ.ಸಾ. : 17**

| | | |
|---|---|---|
| ಸಾಕ್ಷಿಯ ಹೆಸರು | : | ಆನಂದ ಕುಮಾರ |
| ತಂದೆಯ ಹೆಸರು | : | ಕುಮಾರ |
| ವಯಸ್ಸು | : | 40 ವರ್ಷ |
| ಕೆಲಸ | : | ಕೈಗಾದಲ್ಲಿ ಗುತ್ತಿಗೆದಾರ |
| ವಾಸ | : | ರಾಜೀವನಗರ, ಕದ್ರಾ, ಕಾರವಾರ |

**ದಿನಾಂಕಃ 06-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ನಮ್ಮ ಮನೆ ಕದ್ರಾದ ರಾಜೀವನಗರದಲ್ಲಿದ್ದು, ನಮ್ಮ ಮನೆಯಲ್ಲಿ ನಾನು, ನನ್ನ ಹೆಂಡತಿ ಮತ್ತು ಮಗ ಇರುತ್ತೇವೆ. ಮೃತ ವೇಲು, ಆತನ ಹೆಂಡತಿ ಮತ್ತು ಮಕ್ಕಳು ನನಗೆ ಗೊತ್ತು, ಅವರು ನಮ್ಮ ಮನೆ ಪಕ್ಕದವರು. ಅವರು ತಮ್ಮ ಮನೆಯ ಮುಂದುಗಡೆ ಗೂಡು ಅಂಗಡಿ ಇಟ್ಟುಕೊಟ್ಟಿದ್ದರು. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು, ಆತನೂ ಸಹ ಕದ್ರಾದವನು. ಆತನನ್ನು ಊರಿನಲ್ಲಿ ಎಲ್ಲರೂ ಗಿರಿ ಎಂದು ಕರೆಯುತ್ತಾರೆ. ಆತನ ಮನೆ ರಾಜೀವನಗರದ ಕನ್ನಡ ಶಾಲೆಯ ಹಾಗೂ ಚರ್ಚ್ ನ ಹಿಂಬದಿಯಲ್ಲಿರುತ್ತದೆ. ವೇಲು ರವರ ಮನೆಯಿಂದ ಆರೋಪಿಯ ಮನೆಗೆ ನಡೆದುಕೊಂಡು ಹೋಗಲು 5 ನಿಮಿಷಗಳಾಗುತ್ತದೆ.

2. ದಿಃ 14-02-2014 ರಂದು ರಾತ್ರಿ ನಾನು ಊಟ ಮಾಡಿ, ಮನೆಯಲ್ಲಿದ್ದಾಗ, 11-00 ಗಂಟೆ ಸುಮಾರಿಗೆ ಹೊರಗಡೆ ಜನರ ಶಬ್ದ ಕೇಳಿ, ನಾನು ನಮ್ಮ ಮನೆಯಿಂದ ಹೊರಗೆ ಬಂದು ನೋಡಿದಾಗ, ವೇಲುವಿನ ಮನೆಯ ಹತ್ತಿರ ಜನರು ಶಬ್ದ ಮಾಡುತ್ತಿದ್ದನ್ನು ಕೇಳಿಸಿಕೊಂಡು, ನಾನು ಸಹ ವೇಲು ರವರ ಮನೆಯ ಹತ್ತಿರ ಹೋದಾಗ, ಅಲ್ಲಿ ಬಹಳಷ್ಟು ಜನರು ಸೇರಿದ್ದರು. ಅವರ ಮನೆಯಲ್ಲಿ ವಿದ್ಯುತ್ ಬೆಳಕು ಇರಲಿಲ್ಲ, ಮನೆಯ ಬಾಗಿಲು ಅರ್ದ ತೆರೆದಿತ್ತು, ಮನೆಯ ಹಾಲ್ ನಲ್ಲಿ ದೇವರ ದೀಪದ ಬೆಳಕು ಇತ್ತು, ನಾನು ಬಾಗಿಲನಲ್ಲಿ ನಿಂತು ನೋಡಿದಾಗ, ಮನೆಯ ಹಾಲ್ ನಲ್ಲಿ ವೇಲು ರವರ ಹೆಂಡತಿ ಜಾನಕಿ ಕುಳಿತಿದ್ದಳು, ಆಕೆಯ

ಎಡ ಗೈ ತುಂಡಾಗಿತ್ತು, ಆಕೆಯ ಪಕ್ಕದಲ್ಲಿ ಅಶ್ವಿನಿಯು ಕೊಲೆಯಾಗಿ ಬಿದ್ದುಕೊಂಡಿದ್ದಳು, ಸ್ಥಳದಲ್ಲಿ ರಕ್ತ ಬಿದ್ದಿತ್ತು, ಮನೆಯಲ್ಲಿ ವೇಲು ಹಾಗೂ ಆತನ ಮಗ ಸತ್ಯ ನಾರಾಯಣ ಮೂರ್ತಿ ಕಾಣುತ್ತಿರಲಿಲ್ಲ. ಆ ನಂತರ ಪೊಲೀಸರು ಸ್ಥಳಕ್ಕೆ ಬಂದು ಜಾನಕಿಯನ್ನು ಹಾಗೂ ಆಕೆಯ ತುಂಡಾಗಿದ್ದ ಕೈಯನ್ನು ಕೆ.ಪಿ.ಸಿ ಆಸ್ಪತ್ರೆಗೆ ತೆಗೆದುಕೊಂಡು ಹೋದರು.

3. ಆ ನಂತರ ಊರಿನ ಜನರೆಲ್ಲರೂ ವೇಲು ಹಾಗೂ ಆತನ ಮಗ ಸತ್ಯ ನಾರಾಯಣ ಮೂರ್ತಿಯನ್ನು ಹುಡುಕಾಡುತ್ತಿದ್ದರು ಹಾಗೂ ರಸ್ತೆಯಲ್ಲಿ ಜನರು ನಿಂತಿದ್ದರು, ಆಗ ನಾನೂ ಸಹ ರಸ್ತೆಯ ಮೇಲೆ ನಿಂತಿದ್ದೆ. ರಾತ್ರಿ 01-00 ಗಂಟೆ ಸುಮಾರಿಗೆ ಚಾಸಾ-32 ರವರು ತಮ್ಮ ಟೆಂಪೋ ಟ್ರಾವೆಲರ್ ನ್ನು ಚಾಲನೆ ಮಾಡಿಕೊಂಡು ಬಂದು, ವೇಲು ರವರ ಮನೆಯ ಮುಂದೆ ನಿಲ್ಲಿಸಿ, ಏನಾಯಿತು ಎಂದು ನನಗೆ ಕೇಳಿದರು, ಆಗ ನಾನು ವೇಲು ರವರ ಮನೆಯಲ್ಲಿ ಮಗಳ ಕೊಲೆಯಾಗಿದೆ ಹಾಗೂ ವೇಲು ರವರ ಹೆಂಡತಿ ಜಾನಕಿಗೆ ಯಾರೋ ಕೈಯನ್ನು ಕಡಿದಿದ್ದಾರೆ ಎಂದು ಹೇಳಿರುತ್ತೇನೆ. ಸದರಿ ಟೆಂಪೋ ಟ್ರಾವೆಲರ್ ನಲ್ಲಿ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ಕುಳಿತ್ತಿದ್ದನು. ಆತನಿಗೆ ವೇಲುವಿನ ಪರಿಚಯ ಇದ್ದ ಕಾರಣ, ನಾನು ಆತನಿಗೂ ಸಹ ವೇಲು ರವರ ಮನೆಯಲ್ಲಿ ಕೊಲೆಯಾದ ವಿಷಯವನ್ನು ಹೇಳಿದ್ದು, ಆತ ಆ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ. ಆ ನಂತರ ಚಾಸಾ-32 ರವರು ತಮ್ಮ ಟೆಂಪೋ ಟ್ರಾವೆಲರ್ ನ್ನು ಚಾಲನೆ ಮಾಡಿಕೊಂಡು, ಮಲ್ಲಾಪುರದ ಕಡೆಗೆ ಹೋದರು.

4. ಅದೇ ದಿನ ಬೆಳಗಿನ ಜಾವ, ಆದರೆ ಸಮಯ ನೆನಪಿಲ್ಲ, ವೇಲುವಿನ ಮನೆಯ ಹತ್ತಿರ ಇರುವ ಕಾಡಿಗೆ ಹೋಗುವ ರಸ್ತೆಯಲ್ಲಿ ವೇಲುವಿನ ಮಗ ಸತ್ಯ ನಾರಾಯಣ ಮೂರ್ತಿ ಕೊಲೆಯಾಗಿ ಬಿದ್ದಿದ್ದನು, ನಾನು ಬ್ಯಾಟರಿಯ ಬೆಳಕಿನಲ್ಲಿ ನೋಡಿದಾಗ ಆತನ ಕುತ್ತಿಗೆಯನ್ನು ಕಡಿದು ಕೊಲೆ ಮಾಡಲಾಗಿತ್ತು, ಅಲ್ಲಿಂದ ಸ್ವಲ್ಪ ದೂರದಲ್ಲಿ ವೇಲೂ ಸಹ ಕೊಲೆಯಾಗಿ ಬಿದ್ದಿದ್ದನು ಹಾಗೂ ಆತನನ್ನು ಸಹ ಕಡಿದು ಕೊಲೆ ಮಾಡಲಾಗಿತ್ತು ಹಾಗೂ ಸ್ಥಳದಲ್ಲಿ ರಕ್ತ ಚೆಲ್ಲಿತ್ತು. ವೇಲುವಿನ ಶವದ ಪಕ್ಕದಲ್ಲಿ ಆತನ ಊರುಗೋಲು ಸಹ ಬಿದ್ದಿತ್ತು. ಸದರಿ ಊರುಗೋಲನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು-13 ಎಂದು ಗುರುತಿಸಲಾಗಿರುತ್ತದೆ. ಆ ನಂತರ ವೇಲುವಿನ ಹೆಂಡತಿ ಜಾನಕಿಯನ್ನು ಕಾರವಾರದ ಆಸ್ಪತ್ರೆಗೆ ಕರೆದುಕೊಂಡು ಬಂದು, ಆ ನಂತರ ಗೋವಾದ ಬಾಂಬೋಲಿ ಆಸ್ಪತ್ರೆಗೆ ಕರೆದುಕೊಂಡು

ಹೋಗಿರುತ್ತಾರೆ ಎಂದು ತಿಳಿದು ಬಂತು. ಈ ಪ್ರಕರಣದ ಘಟನೆಯ ನಂತರ ನಾನು ಆರೋಪಿಯನ್ನು ಭೇಟಿಯಾಗಿಲ್ಲ ಹಾಗೂ ಆತ ನನ್ನ ಬಳಿ ಯಾವುದೇ ವಿಷಯವನ್ನು ಹೇಳಿರುವುದಿಲ್ಲ.

5. ಆದಾದ 2 ದಿನಗಳ ನಂತರ ಆರೋಪಿಯೇ ಹಣದ ವಿಷಯವಾಗಿ ವೇಲು ಹಾಗೂ ಆತನ ಮಕ್ಕಳನ್ನು ಕತ್ತಿಯಿಂದ ಕೊಲೆ ಮಾಡಿರುತ್ತಾನೆ ಎಂಬ ವಿಷಯ ನನಗೆ ಗೊತ್ತಾಯಿತು. ಆ ದಿನ ರಾತ್ರಿ 10-00 ರಿಂದ 11-00 ಗಂಟೆ ನಡುವೆ ಆರೋಪಿಯು ವೇಲು ಮತ್ತು ಆತನ ಮಕ್ಕಳನ್ನು ಕೊಲೆ ಮಾಡಿರುತ್ತಾನೆ ಹಾಗೂ ಜಾನಕಿಯ ಕೈಯನ್ನು ಕತ್ತಿಯಿಂದ ಕಡಿದಿರುತ್ತಾನೆ ಎಂದು ತಿಳಿದು ಬಂತು. ಈ ವಿಷಯವನ್ನು ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ**

6. ದಿಃ 17-02-2014 ರಂದು ಸಂಜೆ ನಾನು ನನ್ನ ಮೋಟಾರ್ ಸೈಕಲ್ ಮೇಲೆ ಕೆ.ಪಿ.ಸಿ ಕಾಲೋನಿಗೆ ಹೋಗಿ ವಾಪಸ ಚರ್ಚ ವಾಡದ ಪಕ್ಕದ ರಸ್ತೆಯಲ್ಲಿ ಬರುತ್ತಿರುವಾಗ, ಆರೋಪಿಯು ಸಿಕ್ಕಿದ್ದು, ಆತ ನನಗೆ ಕೈ ಮಾಡಿ, ನಿಲ್ಲಿಸಲು ಸೂಚಿಸಿದಂತೆ, ನಾನು ಬೈಕ್ ನ್ನು ನಿಲ್ಲಿಸಿ, ಅವನಿಗೆ ಏನಾಯಿತು ಎಂದು ಕೇಳಿದಾಗ, ಅವನು ಗಾಬರಿಯಿಂದ ನಾನೇ ವೇಲುವಿಗೆ ಅರಣ್ಯಕ್ಕೆ ಹೋಗುವ ಕಾಲು ದಾರಿಯಲ್ಲಿ ಕತ್ತಿಯಿಂದ ಹೊಡೆದು, ಕೊಲೆ ಮಾಡಿರುತ್ತೇನೆ ಹಾಗೂ ಅವನೊಂದಿಗೆ ಆತ ಮಗ ಸಹ ಇದ್ದಿದ್ದರಿಂದ ಅವನಿಗೂ ಸಹ ಕತ್ತಿಯಿಂದ ಕುತ್ತಿಗೆಗೆ ಹೊಡೆದು, ಕೊಲೆ ಮಾಡಿರುತ್ತೇನೆ, ನಾನು ವೇಲುವನ್ನು ಮನೆಯಿಂದ ಕರೆದುಕೊಂಡು ಬರುವಾಗ ಆತನ ಹೆಂಡತಿ ಮಕ್ಕಳು ನೋಡಿದ್ದರಿಂದ, ನಾನು ಮನೆಗೆ ಹೋಗಿ, ಅಶ್ವಿನಿಗೆ ಕತ್ತಿಯಿಂದ ಹೊಡೆದು, ಕೊಲೆ ಮಾಡಿರುತ್ತೇನೆ ಹಾಗೂ ಜಾನಕಿಗೂ ಸಹ ಕತ್ತಿಯಿಂದ ಹೊಡೆದಿದ್ದು, ಅವಳು ಬದುಕಿರುತ್ತಾಳೆ, ಆದರೆ ಈ ವಿಷಯವನ್ನು ನೀನು ಎಲ್ಲಿಯೂ ಹೇಳಬೇಡ ಎಂದು ಆರೋಪಿ ನನ್ನ ಬಳಿ ಹೇಳಿದ್ದನು ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-46 ಎಂದು ಗುರುತಿಸಲಾಯಿತು. ಈ ವಿಷಯವನ್ನು ನಾನು ಪೊಲೀಸರು

ಬಳಿ ಹೇಳಬೇಕು ಎನ್ನುವಷ್ಟರಲ್ಲಿ ಆತನನ್ನು ಪೊಲೀಸರು ದಸ್ತಗಿರಿ ಮಾಡಿರುತ್ತಾರೆ. ಆರೋಪಿ ನನ್ನ ಬಳಿ ಹೇಳಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು, ಆತ ನನ್ನ ಬಳಿ ಯಾವುದೇ ವಿಚಾರ ಹೇಳಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ ವಕೀಲರಿಂದ**

7. ಚಾಸಾ–24 ಮತ್ತು 27 ರವರ ಪರಿಚಯ ನನಗೆ ಇದೆ, ಅವರು ವೇಲು ಮನೆಯ ಪಕ್ಕದವರು. ಅಲ್ಲಿ ಜನರು ಸೇರಿದ್ದಾಗ ಅವರಿಬ್ಬರೂ ಸಹ ಅಲ್ಲಿದ್ದರು ಎಂದರೆ ಸರಿ. ನಾನು ಹೋಗಿ ನೋಡುವ ಮೊದಲೇ ಬಹಳಷ್ಟು ಜನರು ಮನೆಯ ಒಳಗೆ ಹೋಗಿ ನೋಡಿಕೊಂಡು ಬಂದಿರುಬಹುದು.ಅದೇ ರೀತಿ ನಾನು ವೇಲು ಮತ್ತು ಸತ್ಯ ನಾರಾಯಣ ಮೂರ್ತಿಯ ಶವ ಬಿದ್ದ ಸ್ಥಳಕ್ಕೆ ಹೋಗಿ ನೋಡುವಷ್ಟರಲ್ಲಿ ಬಹಳಷ್ಟು ಜನರು ಸೇರಿದ್ದರು ಎಂದರೆ ಸರಿ. ಆ ದಿನ ರಾತ್ರಿ ನಾನು ರಸ್ತೆಯ ಮೇಲೆ ನಿಂತಿದ್ದಾಗ ಚಾಸಾ–32 ರವರು ಟೆಂಪೋ ಟ್ರಾವೆಲರ್ ನಲ್ಲಿ ಬಂದಿದ್ದು, ಅದರಲ್ಲಿ ಆರೋಪಿಯು ಸಹ ಇದ್ದ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಹಣಕ್ಕಾಗಿ ವೇಲು ಮತ್ತು ಆತನ ಮಕ್ಕಳನ್ನು ಕೊಲೆ ಮಾಡಿರುತ್ತಾನೆಂಬ ವಿಷಯ ತಿಳಿದಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ